**ಎಂ ವಿ ಸಿ   1259/2024   ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿ: 02.04.2026  ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ  ಜಿ ಎಂ  ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

6 ಎಕ್ಸರೇಗಳು, ವೈದ್ಯಕೀಯ ಕಡತ, ಹೊರರೋಗಿ ಕೇಸ್ ಶೀಟ್, ಪ್ರಯೋಗಾಲಯ ವರದಿ ಹಾಗೂ ಇ ಸಿ ಜಿ ವರದಿಯನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 66 ರಿಂದ  76 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3 ನೇ ಎದುರುದಾರರ ಪರ  ಶ್ರೀಮತಿ  ಸಿ ವಿ   ವಕೀಲರಿಂದಃ**

ನಾನು ಕಳೆದ 26 ವರ್ಷಗಳಿಂದ ವೃತ್ತಿ ಮಾಡುತ್ತಿದ್ದೇನೆ. ನ್ಯಾಯಾಲಯಕ್ಕೆ ಯಾವುದೇ ಪ್ರಮಾಣಪತ್ರ ಸಲ್ಲಿಸಬೇಕಾದರೆ ನಮ್ಮ ಕೆಎಂಸಿ ನೋಂದಣಿ ಸಂಖ್ಯೆಯನ್ನು ಮಾಡಬೇಕು ಎಂದರೆ ಸರಿಯಲ್ಲ. ನನ್ನ ಕೆಎಂಸಿ ನೋಂದಣಿ ಸಂಖ್ಯೆ 4223.

ನಾನು ಮೊದಲ ಬಾರಿಗೆ ಗಾಯಾಳುವನ್ನು ದಿನಾಂಕ 14.08.2024 ರಂದು ನೋಡಿದೆ. ಗಾಯಾಳುವು ನನ್ನ ಬಳಿ ಬರುವುದಕ್ಕೆ ಮೊದಲು ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ನನ್ನ ಬಳಿಗೆ ಬರುವುದಕ್ಕಿಂತ ಮೊದಲು ಅಪಘಾತವಾದಾಗ ಗಾಯಾಳುವು ಪ್ರಥಮ ಚಿಕಿತ್ಸೆಯನ್ನು ಪಡೆದುಕೊಂಡಿದ್ದರು. ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಆಗಿದೆ. ಅರ್ಜಿದಾರರ ಬಲಗೈ ಹೆಮರಸ್ ಮೂಳೆ ಮುರಿದಿತ್ತು. ಎಕ್ಸರೇ ಮಾಡಿ ಗಾಯಾಳುವಿಗೆ ಆಗಿದ್ದ ಗಾಯಗಳನ್ನು ಖಚಿತಪಡಿಸಿಕೊಂಡೆ. ಆ ಎಕ್ಸರೇ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಬಳಿ ಬಂದ ನಂತರ ಗಾಯಾಳುವಿಗೆ ಶಸ್ತ್ರ ಚಿಕಿತ್ಸೆ ನಡೆಸಿ ಪ್ಲೇಟ್ ಮತ್ತು ಸ್ಕ್ರೂ ಅಳವಡಿಸಿದ್ದೇನೆ.  ಶಸ್ತ್ರ ಚಿಕಿತ್ಸೆ ಆದರೆ ಆಸ್ಪತ್ರೆಯ ವಹಿಯಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ಆ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಶಸ್ತ್ರ ಚಿಕಿತ್ಸೆಯನ್ನು ನಮ್ಮ ವೈದ್ಯರ ತಂಡ ನಡೆಸಿತು.

ಗಾಯಾಳುವು ನನ್ನ ಬಳಿ ಬರುವುದಕ್ಕಿಂತ ಮೊದಲು ಎಂ ಎಲ್ ಸಿ ಯನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿಸಿದ್ದರು. ಇಂದು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಎಂ ಎಲ್ ಸಿ ಎಂದು ನಮೂದು ಮಾಡಿಲ್ಲ ಅಪಘಾತ ಎಂದು ನಮೂದು ಮಾಡಿದೆ. ಗಾಯಾಳುವು ನಮ್ಮ ಬಳಿ ಚಿಕಿತ್ಸೆ ಪಡೆಯುವಾಗ ಅವರಿಗೆ ನಾನು ನೀಡಿರುವ ಚಿಕಿತ್ಸಾ ವಿಧಾನ, ಔಷಧಿಗಳು, ಪ್ರಯೋಗಾಲಯ ವರದಿ, ಇತ್ಯಾದಿ ಎಲ್ಲಾ ವಿವರಗಳನ್ನು ಕೇಸ್ ಶೀಟ್ ನಲ್ಲಿ ನಮೂದು ಮಾಡಿದ್ದೇನೆ ಎಂದರೆ ಸರಿ. ಗಾಯಾಳುವಿಗೆ ಅಪಘಾತವು ಹೇಗೆ ಆಯಿತು ಎಂಬ ಮಾಹಿತಿಯನ್ನು ನಾನು ತಿಳಿದುಕೊಂಡಿದ್ದೇನೆ., ಆದರೆ ವಾಹನಗಳ ಬಗ್ಗೆ ನನಗೆ ಗೊತ್ತಿಲ್ಲ. ಇತ್ತೀಚೆಗೆ ದಿನಾಂಕ 18.02.2026 ರಂದು ಗಾಯಾಳುವನ್ನು ಪರೀಕ್ಷೆ ಮಾಡಿದೆ. ಗಾಯಾಳುವು ನನ್ನ ಬಳಿ ಬಂದಾಗ ಸುಮಾರು 5-6 ಬಾರಿ ಚೆಕ್ ಎಕ್ಸರೇ ಮಾಡಿದ್ದೇನೆ. ಚೆಕ್ ಎಕ್ಸರೇಗೆ ಸಂಬಂಧಿಸಿದಂತೆ ಫಿಲಂಗಳನ್ನು ಹೊರತುಪಡಿಸಿ ಅವುಗಳ ವರದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಗಾಯಾಳುವಿಗೆ ಎಷ್ಟು ಬಾರಿ ಚಿಕಿತ್ಸೆ ನೀಡಿದ್ದೇನೆ ಎಂಬುದಕ್ಕೆ ಸಂಬಂಧಿಸಿದಂತೆ ಒಳರೋಗಿ ಕಡತ ಮತ್ತು ಕೊನೆಯ ಬಾರಿ ನನ್ನ ಬಳಿ ಚಿಕಿತ್ಸೆ ಪಡೆದ ದಿನದ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲದೆ ಇದ್ದರೂ ಸಹ ಅವರ ಹೇಳಿಕೆ ಮೇರೆಗೆ ಅವರನ್ನು ಪರೀಕ್ಷೆಗೆ ಒಳಪಡಿಸಿದ್ದೇನೆ ಎಂದರೆ ಸರಿಯಲ್ಲ.

ಕೇಂದ್ರ ಸರ್ಕಾರದ ಸುತ್ತೋಲೆಯ ಆಧಾರದ ಮೇಲೆ ಅರ್ಜಿದಾರರ ಅಂಗನ್ಯೂನತೆಯನ್ನು ಅಂದಾಜು ಮಾಡಿದ್ದೇನೆ. ಅರ್ಜಿದಾರರ ಅಂಗ ನ್ಯೂನತೆಯ ಸಂಬಂಧ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವುದನ್ನು ಹೊರತುಪಡಿಸಿ ಪ್ರತ್ಯೇಕ ಚಾರ್ಜ ತಯಾರಿಸಿಲ್ಲ, ಕೊನೆಯ ಬಾರಿ ನನ್ನ ಬಳಿ ಪರೀಕ್ಷೆಗೆ ಬಂದಾಗ ನೀಡಿರುವ ಹೊರರೋಗಿ ಚೀಟಿಯಲ್ಲಿ ಲೆಕ್ಕ ಮಾಡಿದ್ದೇನೆ. ಕೇಂದ್ರ ಸರ್ಕಾರದ ಸುತ್ತೋಲೆಯ ಪ್ರಕಾರ ಬೆನ್ನು ಮೂಳೆಗೆ ಸಂಬಂದಿಸಿದ ನೋವುಗಳಿಗೆ ಶೇಕಡ 34 ರಷ್ಟು ಅಂಗ ನ್ಯೂನತೆಯನ್ನು ನೀಡಿದ್ದೇನೆ.

ಅರ್ಜಿದಾರರು ನನ್ನ ಬಳಿ ಚಿಕಿತ್ಸೆಗೆ ಬಂದಾಗ ಅವರಿಗೆ 29 ವರ್ಷ ಆಗಿತ್ತು. ಅವರು ವ್ಯವಸಾಯ ಮತ್ತು ಹೈನುಗಾರಿಕೆ ಮಾಡುತ್ತಿದ್ದರು ಎಂದು ಹೇಳಿದ್ದರು. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆಯನ್ನು ಪಡೆದುಕೊಳ್ಳದೆ ಇರುವ ಕಾರಣ ಮತ್ತು ಅವರು ಯಾವುದೇ ಶಸ್ತ್ರ ಚಿಕಿತ್ಸೆಯನ್ನು ಹೊಂದದೆ ಇರುವ ಕಾರಣ ನಾನು ಅವರ ಅಂಗ ನ್ಯೂನತೆಯನ್ನು ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಕೋರಿಕೆಯ ಮೇರೆಗೆ ಅವರ ಅಂಗನ್ಯೂನತೆಯನ್ನು ಅಂದಾಜು ಮಾಡಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರು ತಮ್ಮ ಬಲಕೈಯನ್ನು ಬಳಸಿ ಕೆಲಸ ಮಾಡಲು ಆಗುತ್ತಿಲ್ಲ ಎಂದು ನೋವು ಹೇಳಿಕೊಂಡರು. ನಾನು ಅಂದಾಜು ಮಾಡಿರುವ ನ್ಯೂನತೆಯ ಪ್ರಮಾಣವು ಅರ್ಜಿದಾರರ ನಿರ್ದಿಷ್ಟ ಅಂಗಕ್ಕೆ ಅನ್ವಯಿಸುತ್ತದೆ. ಒಟ್ಟಾರೆ ದೇಹಕ್ಕೆ ಅನ್ವಯಿಸಬೇಕಾದರೆ 1/3 ರಷ್ಟನ್ನು ಪರಿಗಣಿಸಬೇಕಾಗುತ್ತದೆ ಎಂದರೆ ಅಂತಹ ಮಾರ್ಗಸೂಚಿ ಇಲ್ಲ. ಅರ್ಜಿದಾರರು ಹೇಳಿದ ದೈಹಿಕ ಸಾಮರ್ಥ್ಯಗಳ ಬಗ್ಗೆ ನಾನು ಖುದ್ದು ಪರೀಕ್ಷೆ ಮಾಡಿದ್ದೇನೆ. ಅರ್ಜಿದಾರರಿಗೆ ಆಗಿದ್ದ ಗಾಯಗಳು ಸಂಪೂರ್ಣವಾಗಿ ಗುಣಮುಖವಾಗಿವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಗಿರುವ ಗಾಯಗಳು ಯಾವುದೇ ವ್ಯಕ್ತಿಯು ಗಾಡಿಯಿಂದ ತಾವಾಗಿಯೇ ಬಿದ್ದಾಗ ಆಗಬಹುದಾದಂತಹ ಗಾಯಗಳಾಗಿವೆ ಎಂದರೆ ಸಾಧ್ಯತೆ ಇದೆ.

ನಾನು ನೀಡಿರುವ ಅಂಗನ್ಯೂನತೆಯ ವರದಿಯ ಆಧಾರದ ಮೇಲೆ ಮೆಡಿಕಲ್ ಬೋರ್ಡ್‌ಗೆ ಕಳುಹಿಸಿಕೊಡಲು ನನ್ನ ಅಭ್ಯಂತರವೇನು ಇಲ್ಲ. ಸಾಧ್ಯವಾದರೆ ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂಬ ಕಾರಣದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಅಂಗನ್ಯೂನತೆಯನ್ನು ಮೊಬಲಿಟಿ ಮತ್ತು ಸ್ಟೆಬಲಿಟಿ ಮತ್ತು ಅಡಿಷನಲ್ ವೆಯಟೇಜ್ ಆಧಾರದ ಮೇಲೆ ಲೆಕ್ಕ ಮಾಡಿದ್ದೇನೆ. ಒಟ್ಟಾರೆಯಾಗಿ ಶೇಕಡ 34 ರಷ್ಟು

ಅಂಗನ್ಯೂನತೆಯನ್ನು ಅಂದಾಜು ಮಾಡಿದ್ದೇನೆ. ಅರ್ಜಿದಾರರಿಗೆ ಆಗಿರುವ ನೋವನ್ನು ಮೈಲ್ಡ್ ಪೈನ್ ಎಂದು ಅಂದಾಜು ಮಾಡಿದ್ದೇನೆ. ಯಾವುದೇ ವ್ಯಕ್ತಿಯ ಎರಡು ಸಮಾನ ಅಂಗಗಳ ನಡುವೆ ತುಲನೆ ಮಾಡಬೇಕಾದರೆ ಅವುಗಳ ಕಂಬೈಂಡ್ ಫಾರ್ಮೂಲಾ ಬಳಸಿ ಅಂದಾಜು ಮಾಡಬೇಕು ಎಂದರೆ ಸರಿ.ನಾನು ಈ ಪ್ರಕರಣದಲ್ಲಿ ಸದರಿ ಫಾರ್ಮೂಲಾ ಬಳಸಿ ಎಂದರೆ ಸರಿಯಲ್ಲ. ಕೇಂದ್ರ ಸರ್ಕಾರದ ಸುತ್ತೋಲೆಯನ್ನು ಆಧಾರವಾಗಿ ಇಟ್ಟುಕೊಂಡರೂ ಸಹ ಅರ್ಜಿದಾರರಿಗೆ ನಾನು ನಿರ್ದರಿಸಿರುವಷ್ಟು ಅಂಗನ್ಯೂನತೆ ಬರುವುದಿಲ್ಲ ಎಂದರೆ ಸರಿಯಲ್ಲ.  ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಅರ್ಜಿದಾರರ ಭುಜಕ್ಕೆ ಸಂಬಂಧಿಸಿದಂತೆ ಶೇಕಡ 50 ರಷ್ಟು, ಮಾಂಸಖಂಡಗಳು ಗ್ರೇಡ್ 2 ರಷ್ಟು ಮತ್ತು ಮೊಣಕೈಗೆ ಸಂಬಂಧಿಸಿದಂತೆ ಶೇಕಡ 45 ರಷ್ಟು ಹಾಗೂ ಮಾಂಸಖಂಡಗಳು ಗ್ರೇಡ್ 2 ರಷ್ಟು ದುರ್ಬಲಗೊಂಡಿದೆ ಎಂಬ ಬಗ್ಗೆ ಪ್ರತ್ಯೇಕ ಚಾರ್ಟನ್ನು ಸಿದ್ದಪಡಿಸಿದ್ದೇನೆ. ಅರ್ಜದಾರರ ವಯಸ್ಸನ್ನು ಗಮನದಲ್ಲಿ ಇಟ್ಟುಕೊಂಡು ನೋಡಿದಾಗ ಅವರಿಗೆ ಆಗಿರುವ ಗಾಯಗಳಿಂದ ಅವರು ಭವಿಷ್ಯದಲ್ಲಿ ಸಂಪೂರ್ಣವಾಗಿ ಗುಣಮುಖವಾಗುತ್ತಾರೆ ಎಂದರೆ ಸಾಧ್ಯತೆ ಕಡಿಮೆ. ಅರ್ಜಿದಾರರಿಗೆ ಅನುಕೂಲ ಆಗಲಿ  ಎಂಬ ಕಾರಣದಿಂದ ಮತ್ತು ಹೆಚ್ಚಿನ ಪರಿಹಾರದ ಸಿಗಲಿ ಎಂಬ ಕಾರಣದಿಂದ ಗುಣಮುಖವಾಗುವ ಸಾಧ್ಯತೆ ಕಡಿಮೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರನ್ನು ಮೊದಲ ಬಾರಿಗೆ ನೋಡಿದಾಗ ಅವರ ಗಾಯಗಳು ತಾಜಾ ಆಗಿದ್ದವು. ಅರ್ಜಿದಾರರ ಬೋನ್ ಅಲಾಯನ್ ಮೆಂಟ್ ಪ್ರಾಪರ್ ಆಗಿತ್ತು. ಅರ್ಜಿದಾರರಿಗೆ ಆಗಿರುವ ಗಾಯಗಳ ಬಗ್ಗೆ ನಾನು ಖುದ್ದಾಗಿ ಪರೀಕ್ಷೆ ಮಾಡಿದ್ದೇನೆ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**